ಶ್ರೀ ಎ.ಎಂ.ದೀಪಕ್ ಚಂದ್ರ ಮತ್ತು ಶ್ರೀ ಎ.ಎಂ.ಮಲ್ಲೇಶ್‌ಗೌಡ ಇವರು ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು, ಬೀರನಹಳ್ಳಿ ಗ್ರಾಮ, ಸರ್ವೆ ನಂ.19(ಭಾಗ) (10.121 ಹೆಕ್ಟೇರ್) ಮತ್ತು ಕಡೂರು ತಾಲ್ಲೂಕು, ಸಾದರಹಳ್ಳಿ ಗ್ರಾಮ, ಸರ್ವೆ ನಂ.86(ಭಾಗ) (1.619 ಹೆಕ್ಟೇರ್) ಮತ್ತು ಸರ್ವೆ ನಂ.85(ಭಾಗ) (4.048 ಹೆಕ್ಟೇರ್) ಒಟ್ಟು 15.788 ಹೆಕ್ಟೇರ್ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 8,60,000 ಟನ್ ಸಾಮರ್ಥ್ಯದ ಕಟ್ಟಡಕಲ್ಲು ಗಣಿಗಾರಿಕೆ ಉದ್ದಿಮೆಯನ್ನು ನಡೆಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 15.09.2020 ರಂದು ಪೂರ್ವಾಹ್ನ 11.30 ಗಂಟೆಗೆ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡಾವಳಿಗಳು.

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಚಂದ್ರಪ್ರಸಾದ್ ಎಸ್ಟೇಟ್, ಮುತ್ತಿಘಟ್ಟ ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ |
| ಹಾಜರಿದ್ದ ಪರಿಸರ ಸಾರ್ವಜನಿಕ ಆಲಿಕೆ ಸಮಿತಿಯ ಸದಸ್ಯರುಗಳ ವಿವರ | | ಪದನಾಮ |
| 1. | ಶ್ರೀ. ಬಗಾದಿ ಗೌತಮ್, ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು | ಅಧ್ಯಕ್ಷರು |
| 2. | ಶ್ರೀ. ಕುಮಾರ್, ಅಪರ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು | ಸದಸ್ಯರು |
| 3. | ಶ್ರೀ. ರಮೇಶ್ ಡಿ ನಾಯಕ್, ಹಿರಿಯ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಮಂಗಳೂರು. | ಸದಸ್ಯರು |
| 4. | ಶ್ರೀ ಕೀರ್ತಿಕುಮಾರ್ ಕೆ, ಪರಿಸರ ಅಧಿಕಾರಿ, ಹೆಚ್ಚುವರಿ ಪ್ರಭಾರ, ಪ್ರಾದೇಶಿಕ ಕಛೇರಿ, ಚಿಕ್ಕಮಗಳೂರು. | ಸದಸ್ಯ ಸಮಾವೇಷಕರು |
| ಹಾಜರಿದ್ದ ಇತರ ಅಧಿಕಾರಿಗಳ ವಿವರವನ್ನು <u>ಅನುಬಂಧ-3</u> ರಲ್ಲಿ ಲಗತ್ತಿಸಲಾಗಿದೆ) | | |
| 5. | ಶ್ರೀಮತಿ ಶ್ವೇತ ಎಸ್.ಆರ್., ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾದೇಶಿಕ ಕಛೇರಿ, ಚಿಕ್ಕಮಗಳೂರು | |
| 6. | ವಸಂತ್‌ಕುಮಾರ್ ಎಸ್.ಪಿ., ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಿಕ್ಕಮಗಳೂರು. | |
| 7. | ಕಾರ್ತಿಕ್ ವಿ.ಪಿ, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಿಕ್ಕಮಗಳೂರು. | |
| 8 | ದೇವರಾಜ್, ಕಿರಿಯ ಇಂಜಿನಿಯರ್, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಿಕ್ಕಮಗಳೂರು. | |
| 9 | ಇಸ್ಮಾಯಿಲ್ ಖಾನ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ವೈ. ಮಲ್ಲಾಪುರ. | |
| ಶ್ರೀ ಎ.ಎಂ.ದೀಪಕ್ ಚಂದ್ರ ಮತ್ತು ಶ್ರೀ ಎ.ಎಂ.ಮಲ್ಲೇಶ್‌ಗೌಡ ಇವರ ಉದ್ದೇಶಿತ ಯೋಜನೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು | | |
| 1. | ಶ್ರೀ ಎ.ಎಂ.ದೀಪಕ್ ಚಂದ್ರ ಮತ್ತು ಶ್ರೀ ಎ.ಎಂ.ಮಲ್ಲೇಶ್‌ಗೌಡ, ಮಾಲೀಕರು | |
| 2. | ಶ್ರೀ ದಿವಾಕರ್, ಶ್ರೀ ನಾರಾಯಣ ರೆಡ್ಡಿ, ಹಾಗೂ ಡಾ. ಎ.ಕೆ. ಚಕ್ರವರ್ತಿ ಮೆ// ಕೆ.ಆರ್.ಎಸ್ ಎಂಟರ್ ಪ್ರೈಸಸ್, ಎನ್ವಿರಾಮೆಂಟಲ್ ಕನ್ಸಲ್ಟೆಂಟ್ಸ್, ಬೆಂಗಳೂರು | |
| ಹಾಜರಿದ್ದ ಸಾರ್ವಜನಿಕರ ವಿವರವನ್ನು <u>ಅನುಬಂಧ-2</u> ರಲ್ಲಿ ಲಗತ್ತಿಸಲಾಗಿದೆ | | |

**<u>ಪೀಠಿಕೆ:</u>**

ಶ್ರೀ ಎ.ಎಂ.ದೀಪಕ್ ಚಂದ್ರ ಮತ್ತು ಶ್ರೀ ಎ.ಎಂ.ಮಲ್ಲೇಶ್‌ಗೌಡ ಇವರು ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು, ಬೀರನಹಳ್ಳಿ ಗ್ರಾಮ, ಸರ್ವೆ ನಂ.19(ಭಾಗ) (10.121 ಹೆಕ್ಟೇರ್) ಮತ್ತು ಕಡೂರು ತಾಲ್ಲೂಕು, ಸಾದರಹಳ್ಳಿ ಗ್ರಾಮ, ಸರ್ವೆ ನಂ.86(ಭಾಗ) (1.619 ಹೆಕ್ಟೇರ್) ಮತ್ತು ಸರ್ವೆ ನಂ.85(ಭಾಗ) (4.048 ಹೆಕ್ಟೇರ್) ಒಟ್ಟು 15.788 ಹೆಕ್ಟೇರ್ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 8,60,000 ಟನ್ ಸಾಮರ್ಥ್ಯದ ಕಟ್ಟಡ ಕಲ್ಲು ಗಣಿಗಾರಿಕೆ ಉದ್ದಿಮೆಯನ್ನು ನಡೆಸಲು ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿ ದಿನಾಂಕ:14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಆಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ:01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆಯನ್ವಯ ಸದರಿ ಉದ್ದೇಶಿತ ಯೋಜನೆಯ ವಿಸ್ತೀರ್ಣವು 5 ಹೆಕ್ಟೇರ್‌ಗಿಂತ ಜಾಸ್ತಿಯಿರುವುದರಿಂದ ಪ್ರವರ್ಗ-ಬಿ1 (Category-B1)ರಡಿಯಲ್ಲಿ ಒಳಪಡುವುದರಿಂದ ರಾಜ್ಯದಲ್ಲಿ ಸ್ಥಾಪಿತವಾಗಿರುವ ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದಿಂದ (State Environmental Impact Assessment Authority) ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರಕ್ಕೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಅರ್ಜಿಯನ್ನು ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದ ಅಡಿಯಲ್ಲಿ ಬರುವ ರಾಜ್ಯ ಪರಿಸರ ಮೌಲ್ಯ ನಿರ್ಣಯ ಸಮಿತಿ (State Level Expert Appraisal Committee) ಯು ಪರಿಶೀಲಿಸಿ ದಿನಾಂಕ 25.11.2020 ರಂದು ಷರತ್ತುಬದ್ಧ ನಿಬಂಧನೆ (Terms of Reference) ಗಳನ್ನು ನೀಡಿರುತ್ತಾರೆ. ಈ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಕೆ.ಆರ್.ಎಸ್ ಎಂಟರ್ ಪ್ರೈಸಸ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ದಿನಾಂಕ 13.05.2020 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 24.07.2020ರಂದು ಅನುಮೋದಿತ ಟಿಪ್ಪಣಿಯ ಮೂಲಕ ಕೋರಲಾಗಿರುತ್ತದೆ. ಆ ಮೇರೆಗೆ ಜಿಲ್ಲಾಧಿಕಾರಿಗಳು ದಿನಾಂಕ:15.09.2020 ರಂದು ಪೂರ್ವಾಹ್ನ 11.30 ಗಂಟೆಗೆ ಚಂದ್ರಪ್ರಸಾದ್ ಎಸ್ಟೇಟ್, ಮುತ್ತಿಘಟ್ಟ ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಹೊಸದಿಗಂತ (ಕನ್ನಡ) ಹಾಗೂ ಟೈಮ್ಸ್ ಆಫ್ ಇಂಡಿಯಾ (ಆಂಗ್ಲ) ಗಳಲ್ಲಿ ದಿನಾಂಕ 14.08.2020 ರಂದು ಪತ್ರಿಕಾ ಪ್ರಕಟಣೆ ನೀಡಿ ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿರುತ್ತದೆ. ಮುಂದುವರೆದು, ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ಸ್ಥಳೀಯ ದಿನಪತ್ರಿಕೆಯಾದ ಜನಮಿತ್ರದಲ್ಲಿಯೂ ಸಹಾ ದಿನಾಂಕ:15.08.2020 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು
- ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಮಗಳೂರು
- ಪುರಸಭೆ, ಕಡೂರು, ಚಿಕ್ಕಮಗಳೂರು ಜಿಲ್ಲೆ.
- ಚೀಲನಹಳ್ಳಿ ಗ್ರಾಮ ಪಂಚಾಯಿತಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
- ವೈ.ಮಲ್ಲಾಪುರ ಗ್ರಾಮ ಪಂಚಾಯಿತಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು
- ರಾಜ್ಯ ಮಟ್ಟದ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ:709, 7ನೇ ಮಹಡಿ, 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ಉದ್ದಿಮೆಯ ಸ್ಥಾಪನೆ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ ಪತ್ರಗಳನ್ನು ಹಂಚಲಾಗಿರುತ್ತದೆ.

ಈ ಮೇಲೆ ತಿಳಿಸಿದ ಕಛೇರಿಗಳಲ್ಲಿ ಉದ್ದೇಶಿತ ಯೋಜನೆಗೆ ಸಂಭಂದಿಸಿದಂತೆ ಯಾವುದೇ ಲಿಖಿತ ಪತ್ರಗಳು ಸ್ವೀಕೃತವಾಗಿರುವುದಿಲ್ಲ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 15.09.2020 ರಂದು ಪೂರ್ವಾಹ್ನ 11:30 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.

ಸದಸ್ಯ ಸಮಾವೇಷಕರು ಹಾಗೂ ಪರಿಸರ ಅಧಿಕಾರಿಗಳಾದ ಶ್ರೀ ಕೆ. ಕೀರ್ತಿಕುಮಾರ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿ, ಸಭಾ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳನ್ನು ಸಭೆ ನಡೆಸಿಕೊಡುವಂತೆ ಕೋರಿದರು.

ಮುಂದುವರೆದಂತೆ, ಸದರಿ ಯೋಜನೆಯ ಬಗ್ಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ವಿವರಣೆ ನೀಡುವಂತೆ ಯೋಜನಾ ಪ್ರವರ್ತಕರಿಗೆ ಸಭೆಯ ಅಧ್ಯಕ್ಷರು ಸೂಚಿಸಿದರು.

ಅದರಂತೆ, ಶ್ರೀ ಎ.ಎಂ.ದೀಪಕ್ ಚಂದ್ರ ಮತ್ತು ಶ್ರೀ ಎ.ಎಂ.ಮಲ್ಲೇಶ್‌ಗೌಡ ಪರವಾಗಿ ಶ್ರೀ ದಿವಾಕರ್, ಶ್ರೀ ನಾರಾಯಣ ರೆಡ್ಡಿ, ಹಾಗೂ ಡಾ. ಎ.ಕೆ. ಚಕ್ರವರ್ತಿ ಮೆ// ಕೆ.ಆರ್.ಎಸ್ ಎಂಟರ್ ಪ್ರೈಸಸ್, ಎನ್ವಿರಾಮೆಂಟಲ್ ಕನ್ಸಲ್ಟೆಂಟ್ಸ್, ಬೆಂಗಳೂರು ಇವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿಯ ಕಾರ್ಯಕಾರಿ ಸಾರಾಂಶಗಳಾದ ಯೋಜನೆ ಪ್ರಸ್ತಾವನೆ, ಸರ್ಕಾರದ ಮಂಜೂರಾತಿಗಳು, ಸ್ಥಳೀಯ ನಕ್ಷೆ, ಅಧ್ಯಯನ ಕ್ಷೇತ್ರದ ನಕ್ಷೆಗಳು, ಭೂ ಬಳಕೆಯ ವಿವರಗಳು, ಸ್ಥಳದ ಪ್ರಮುಖ ಲಕ್ಷಣಗಳು, ಮೂಲಭೂತ ಬೇಡಿಕೆಗಳು ಮತ್ತು ಸೌಕರ್ಯಗಳು, ಮಳೆ ನೀರು ನಿರ್ವಹಣೆ, ಪರಿಸರದ ಅಂಶಗಳಾದ ವಾಯು, ಜಲ, ಶಬ್ದ, ಭೂ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಪರಿಸರ ನಿರ್ವಹಣಾ ಯೋಜನೆ, ಪರಿಸರ ಸಂರಕ್ಷಣಾ ಕಾರ್ಯಗಳ ಆಯವ್ಯಯ ಒಟ್ಟು ಪರಿಸರ ನಿರ್ವಹಣಾ ಯೋಜನೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು. ಮಂಡನೆಯಲ್ಲಿ ಪ್ರಸ್ತಾಪಿಸಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತದೆ.

1. ಪ್ರಸ್ತಾವಿತ ಕಟ್ಟಡಕಲ್ಲು ಗಣಿಗಾರಿಕೆ ಯೋಜನೆಯು 39 ಎಕರೆ (15.7827 ಹೆಕ್ಟೇರ್) (ಪ್ರತ್ಯೇಕವಾಗಿ 4 ಎಕರೆಗಳು (1.619 ಹೆಕ್ಟೇರ್), 10 ಎಕರೆಗಳು (4.048 ಹೆಕ್ಟೇರ್) ಮತ್ತು 25 ಎಕರೆಗಳು (10.21 ಹೆಕ್ಟೇರ್) 3 ಕ್ವಾರಿಗಳ ಸಮೂಹವಾಗಿದೆ. 86(ಪಿ), 85(ಪಿ) ಸಾದರಹಳ್ಳಿ ಮತ್ತು 19(ಪಿ) ಬೀರನಹಳ್ಳಿ ಗ್ರಾಮದ ಪಟ್ಟಾ ಭೂಮಿಯಾಗಿದ್ದು ಇದು ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯಲ್ಲಿದೆ.

2. ಪ್ರಸ್ತಾವಿತ ಗಣಿಗಾರಿಕೆಯಿಂದ ಸುಮಾರು 148 ಜನರಿಗೆ ನೇರ (ಗುತ್ತಿಗೆ ಕೆಲಸಗಾರರು ಸೇರಿದಂತೆ) ಉದ್ಯೋಗ ಸೃಷ್ಟಿಸುತ್ತದೆ. ಸದರಿ ಯೋಜನೆಗೆ ನೀರಿನ ಮೂಲವು ಬೋರ್ ವೆಲ್ ಆಗಿದ್ದು ಒಟ್ಟು ಬಳಕೆಯು 17.4 ಕಿಲೋ ಲೀಟರುಗಳಾಗಿದ್ದು ಇದರಲ್ಲಿ ಮುಖ್ಯವಾಗಿ ಗೃಹಬಳಕೆ (8.15 ಕೆ.ಎಲ್.ಡಿ), ಧೂಳಿನ ನಿಯಂತ್ರಣ (4.5 ಕೆ.ಎಲ್.ಡಿ) ಮತ್ತು ಗಿಡಮರಗಳಿಗೆ (4.75 ಕೆ.ಎಲ್.ಡಿ) ನೀರುಣಿಸುವುದಕ್ಕಾಗಿ ಉಪಯೋಗಿಸಲು ಉದ್ದೇಶಿಸಲಾಗಿದೆ.

3. ಯೋಜನೆಯ ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿ ದೃಷ್ಟಿಯಿಂದ ಮುಂಬರುವ ವರ್ಷಗಳಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (Corporate Social Responsibilities) ಕ್ಷೇತ್ರದಲ್ಲಿ ವಿವಿಧ ಉಪಕ್ರಮಗಳಿಗಾಗಿ ವರ್ಷವೊಂದಕ್ಕೆ ರೂ. 9.75 ಲಕ್ಷ ಗಳನ್ನು ವಿನಿಯೋಗಿಸುವುದಾಗಿ ಹಾಗೂ ಈ ಉಪಕ್ರಮಗಳು ಕೌಶಲ್ಯ ಅಭಿವೃದ್ಧಿ, ಆರೋಗ್ಯ ಮತ್ತು ನೈರ್ಮಲ್ಯ, ಶಿಕ್ಷಣ ಮತ್ತು ಜಲ ನಿರ್ವಹಣೆಗಾಗಿ ಮೀಸಲಿಟ್ಟಿರುವುದಾಗಿ ತಿಳಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆ ಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಸತೀಶ್, ಬೀರನಹಳ್ಳಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
   ನಮ್ಮ ಊರಿನ ಸುತ್ತಮುತ್ತ ಯಾವುದೇ ಮತ್ತೆ ಗಣಿಗಾರಿಕೆ ಆಗುವುದು ಬೇಡ ಯಾಕೆಂದರೆ ಈಗಾಗಲೇ ಎರಡು ಗಣಿಗಾರಿಕೆ ಇದ್ದು ಅದರಿಂದ ಮನೆಗಳ ಮೇಲೆ ಪರಿಣಾಮ ಬೀರಿದೆ ಹಾಗೂ ಗಣಿಗಾರಿಕೆಯಿಂದ ಯಾವುದೇ ರೀತಿಯ ಮೂಲಭೂತ ಸೌಕರ್ಯ ಇದುವರೆಗೂ ಸಿಗದ ಕಾರಣ ಉದ್ದೇಶಿತ ಯೋಜನೆಯು ಬೇಡವೆಂದು ತಿಳಿಸಿದರು.

2. **ಶ್ರೀ ನಾಗರಾಜು, ವೀರಾಂಜನೇಯ ಯುವಕ ಸಂಘದ ಅಧ್ಯಕ್ಷರು, ಬೀರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
   ಸದರಿ ಉದ್ದೇಶಿತ ಯೋಜನೆಯಿಂದ ಅಂತರ್ಜಲ ಕುಸಿಯುತ್ತದೆ ಹಾಗೂ ಇಲ್ಲಿ ರೈತಾಪಿ ಕುಟುಂಬದವರಿರುವುದರಿಂದ ಹೆಚ್ಚಾಗಿ ವ್ಯವಸಾಯದ ಮೇಲೆ ಅವಲಂಬಿತವಾಗಿರುವದರಿಂದ ಅಂತರ್ಜಲ ಕುಸಿತದಿಂದ ನೀರಿನ ಅಭಾವ ಉಂಟಾಗುತ್ತದೆ. ಮನೆಗಳ ಮೇಲೆ ದುಷ್ಪರಿಣಾಮ ಬೀರಿದೆ, ಇಲ್ಲಿ ಭದ್ರಾ ಮೇಲ್ದಂಡೆ ಯೋಜನೆಯು ನಮ್ಮ ಊರಿನ ಮೂಲಕ ಹಾದು ಹೋಗುವುದರಿಂದ ಸಣ್ಣ ಪ್ರಮಾಣದ ಧೂಳಿನ ಕಣಗಳು ಕುಡಿಯುವ ನೀರಿನಲ್ಲಿ ಸೇರುವ ಸಾಧ್ಯತೆಯಿರುತ್ತದೆ. ಇಲ್ಲಿ ಗಣಿಗಾರಿಕೆ ಮಾಡುವುದರಿಂದ ನಾವು ಬೆಳೆ ಬೆಳೆಯಲು ಸಾಧ್ಯವಾಗುವುದಿಲ್ಲ ಹಾಗೂ ಪಕ್ಕದಲ್ಲಿ ಗೋಮಾಳ ಜಾಗವಿದ್ದು ಅಲ್ಲಿ ಜಾನುವಾರುಗಳು ಮೇಯಲು ತೊಂದರೆಯಾಗುತ್ತದೆ.

3. **ಶ್ರೀ ಜಗದೀಶ್, ಕೆ.ಬಿದರೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ :**
ಈ ಯೋಜನೆಯಿಂದ ಉದ್ಯೋಗಾವಕಾಶ ಸಿಗುತ್ತದೆ, ಗಿಡಮರ ಮತ್ತು ಬೆಳೆಗೆ ತೊಂದರೆಯಾಗದಂತೆ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡು ಯೋಜನೆಯನ್ನು ಮಾಡುವುದರಿಂದ ಯಾವುದೇ ತೊಂದರೆಯಾಗುವುದಿಲ್ಲವೆಂದು ತಿಳಿಸಿದರು.

4. **ಶ್ರೀ ಪ್ರಭುರಾಜ ಶೇಖರ್, ಉಳಿಗೆರೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ಗ್ರಾಮಸ್ಥರಿಗೂ ಅನುಕೂಲವಾಗುತ್ತದೆ, ಸುಲಭವಾಗಿ ಕಟ್ಟಡ ಕಾಮಗಾರಿಗೆ ಬೇಕಾದ ಸಾಮಗ್ರಿಗಳು ಲಭ್ಯವಾಗುತ್ತವೆ, ರಸ್ತೆ ಅಭಿವೃದ್ಧಿಯಾಗುತ್ತದೆ, ಯುವಕರಿಗೆ ಉದ್ಯೋಗಗಳು ಲಭ್ಯವಾಗುತ್ತದೆ ಹಾಗೂ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಯೋಜನೆಯನ್ನು ಮಾಡುವುದರಿಂದ ಅನುಕೂಲವಾಗುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

5. **ಶ್ರೀ ಸುದರ್ಶನ್, ಬೆಳ್ಳಿಮೋಡ ಎಸ್ಟೇಟ್, ಚಿಕ್ಕಮಗಳೂರು:**
ಯೋಜನಾದಾರರು ಕಳೆದ ಹಲವಾರು ವರ್ಷದಿಂದ ಚಿಕ್ಕಮಗಳೂರು ಜಿಲ್ಲೆಗೆ ಆಸ್ಪತ್ರೆ, ಕಾಲೇಜು, ದೇವಸ್ಥಾನಗಳು ಹೀಗೆ ಹಲವಾರು ಕೊಡುಗೆಗಳನ್ನು ನೀಡಿದ್ದು, ಸದರಿ ಕಲ್ಲುಗಣಿಗಾರಿಕೆಯಿಂದಲೂ ಸಹ ಗ್ರಾಮಕ್ಕೆ, ಗ್ರಾಮದ ಯುವಕರಿಗೆ ಖಂಡಿತ ಅನುಕೂಲ ಮಾಡಿಕೊಡುವರು ಎಂದು ತಿಳಿಸಿದರು.

6. **ಶ್ರೀ ಪರಮೇಶ್ ನಾಯ್ಕ, ಸಾದರಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ಸದರಿ ಸಭೆ ಸೇರಿರುವುದು ಬದುಕುವುದಕ್ಕಾಗಿ ಹಾಗೂ ಈ ಕಲ್ಲುಗಣಿಗಾರಿಕೆಯಿಂದ ಯೋಜನಾದಾರರಿಗೆ ಮಾತ್ರ ಅನುಕೂಲವಾಗುವುದು, ಸುತ್ತಮುತ್ತಲ ಹಳ್ಳಿ ಜನರು ರೈತಾಪಿ ವರ್ಗದವರು, ಗಣಿಗಾರಿಕೆಯ ಉದ್ಯೋಗ ನಂಬಿ ಬದುಕುತ್ತಿಲ್ಲ, ಆದ ಕಾರಣ ಸದರಿ ಯೋಜನೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು.

7. **ಅಧ್ಯಕ್ಷರು, ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು.**
ಸದರಿ ಯೋಜನೆಗೆ ಅನುಮತಿ ನೀಡುವುದು ಕಾನೂನಿನ ಅಡಿಯಲ್ಲಿರುತ್ತದೆ ಹಾಗೂ ಯೋಜನೆಗೆ ಅನುಮತಿ ನೀಡುವ ಮುನ್ನ ಸುತ್ತಮುತ್ತಲ ಜನ, ನೀರಿನ ಮೂಲ, ಜಾನುವಾರ, ರಸ್ತೆ, ವಸತಿ ಇವುಗಳಿಗೆ ಸಂಬಂಧಿಸಿದಂತೆ ಸುರಕ್ಷತಾ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ಅನುಮತಿ ನೀಡುವುದು ಬಿಡುವುದು ಕಾನೂನಿನ ಅಡಿಯಲ್ಲಿ ಸರ್ಕಾರದ ನಿರ್ಧಾರವಾಗುತ್ತದೆ. ಯಾರ ಮಾತನ್ನು ಪರಿಗಣಿಸದೇ ಯೋಜನೆಗೆ ಚಾಲನೆ ನೀಡುವುದಾಗಿ ಭ್ರಮಿಸಬಾರದು, ಒಂದು ವೇಳೆ ಅನುಮತಿ ದೊರೆತರೂ ಸಹ 6 ತಿಂಗಳಿಗೊಮ್ಮೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಯೋಜನೆಗೆ ಸಂಬಂಧಿಸಿದ ತಂಡ ಭೇಟಿ ನೀಡಿ ಪರಿಸರಕ್ಕೆ ಸಂಬಂಧಿಸಿದ ಮಾನದಂಡಗಳ ಪರಿವೀಕ್ಷಣೆ ನಡೆಸಲಾಗುವುದು ಎಂದು ತಿಳಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಕಡ್ಡಾಯವಾಗಿ ರೆಕಾರ್ಡ್ ಮಾಡಲಾಗುತ್ತದೆ ಎಂದು ಸಭೆಗೆ ತಿಳಿಸಿದರು.

8. **ಗೌತಮ್, ಸಾದರಹಳ್ಳಿ, ಸಾದರಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ಸಾದರಹಳ್ಳಿ ಗ್ರಾಮದ ಯೋಜಿತ ಪ್ರದೇಶದ ಸುತ್ತಮುತ್ತ ಐತಿಹಾಸಿಕ ಸ್ಥಳಗಳು, ನದಿಗಳು ಹಾಗೂ ಕೆಂಪುಮಣ್ಣಿನ ವ್ಯವಸಾಯ ಯೋಗ್ಯವಾದ ಭೂಮಿಯಿದ್ದು, ಸದರಿ ಚಟುವಟಿಕೆಯ ವಾಯುಮಾಲಿನ್ಯದಿಂದ ತೆಂಗಿನಬೆಳೆಗೆ ಅನಾನುಕೂಲ ಉಂಟಾಗಿ ಇಳುವರಿ ಕುಂಠಿತವಾಗುತ್ತದೆ ಹಾಗೂ ಮುಂದಿನ ಪೀಳಿಗೆಗೆ ಮತ್ತು ನಿವಾಸಿಗಳಿಗೂ ತೊಂದರೆಯಾಗುವುದಾಗಿ ತಿಳಿಸಿದರು.

9. **ಮಂಜುನಾಥ ನಾಯ್ಕ, ಬೀರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ಸದರಿ ಯೋಜನೆಯಿಂದ ತೊಂದರೆಯಾಗುವುದಾಗಿ ತಿಳಿಸಿದರು.

10. **ಮಂಜು, ಮಾಡಾಳು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ಪ್ರಸ್ತುತ ದುಡಿಮೆಯಿಲ್ಲದ ಕಾರಣ, ಉದ್ಯೋಗದ ಅವಶ್ಯಕತೆಯಿದ್ದು, ಉದ್ಯೋಗ ನೀಡುವ ಭರವಸೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

11. **ಓಂಕಾರನಾಯ್ಕ, ಬೀರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ನಾವು ಕೃಷಿ ಅವಲಂಬಿತ ಕುಟುಂಬವಾಗಿದ್ದು, ಈಗಾಗಲೇ ಇರುವ ಗಣಿಗಳ ಧೂಳಿನಿಂದ ತೊಂದರೆಯಾಗುತ್ತಿದೆ. ಸದರಿ ಡೈನಮೋ ಸ್ಫೋಟದಿಂದ ತೊಂದರೆಯಾಗುತ್ತಿದೆ ಆದ್ದರಿಂದ ಸದರಿ ಯೋಜನೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು.

12. **ಪ್ರಸಾದ್ ಕುಮಾರ್, ಸಾದರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:**
ಗಣಿಗಾರಿಕೆಯಿಂದ ಎಷ್ಟು ಜನಕ್ಕೆ ಉದ್ಯೋಗ ಕೊಟ್ಟಿದ್ದಾರೆ ಎಂದು ಇಲ್ಲಿಯ ಜನಕ್ಕೆ ಮಾತ್ರ ಗೊತ್ತು ಹಾಗೂ ಇಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಸುತ್ತಮುತ್ತ ಹಳ್ಳಿಗಳಲ್ಲಿ ಸಮೀಕ್ಷೆ ನಡೆಸಿ ಅನುಮತಿ ನೀಡಬೇಕೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು

13. ಪುನೀತ್ ಕೆ.ಎಸ್., ಸಾದರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:
ಗಣಿಗಾರಿಕೆಯಿಂದ 150 ಜನಕ್ಕೆ ಉದ್ಯೋಗ ಕೊಡುವುದಾಗಿ ತಿಳಿಸಿದ್ದಾರೆ ಆದರೆ ಸದರಿ ಯೋಜನೆಯ ಬದಲು ಗಾರ್ಮೆಂಟ್ಸ್ ಕಾರ್ಖಾನೆ ಸ್ಥಾಪನೆ ಮಾಡಿ ಉದ್ಯೋಗ ನೀಡಿ ಎಂದು ಕೇಳಿಕೊಂಡರು ಹಾಗೂ ಗಣಿಗಾರಿಕೆಯಿಂದ ಸುತ್ತಮುತ್ತಲ ಪ್ರದೇಶಕ್ಕೆ ತೊಂದರೆಯುಂಟಾಗುವುದರಿಂದ ಸದರಿ ಯೋಜನೆಗೆ ಅನುಮತಿ ನೀಡಬಾರದೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

14. ಸೀನಾ ನಾಯಕ್, ಬೀರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:
ಗಣಿಗಾರಿಕೆ ಆರಂಭವಾದಾಗಿನಿಂದ ಸಾವಿರಾರು ತೆಂಗಿನಮರಗಳು ಹಾಳಾಗಿದ್ದು, ಮಳೆಯ ಪ್ರಮಾಣವು ಕಡಿಮೆಯಾಗಿರುತ್ತದೆ ಆದ್ದರಿಂದ ಗಣಿಗಾರಿಕೆ ನಡೆಸುವುದು ಅನುಕೂಲಕರವಲ್ಲವೆಂದು ಅಭಿಪ್ರಾಯಪಟ್ಟರು.

15. ಚಂದ್ರ ನಾಯಕ್, ಬೀರನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ:
ಯೋಜಿತ ಜಾಗದ ಸುತ್ತಮುತ್ತ ಹಳ್ಳಿಗಳಿದ್ದು ಅಲ್ಲಿಯ ಜನವಸತಿಯ ಮೇಲೆ ಪರಿಣಾಮ ಬೀರುತ್ತದೆ. ಕುಡಿಯುವ ನೀರಿಗೆ ಪರಿಣಾಮ ಬೀರುತ್ತದೆ, ಯೋಜನೆದಾರರು ಯೋಜನೆಯಲ್ಲಿ ಇಲ್ಲಿ ಬೆಳೆಯುವ ಬೆಳೆಗಳು ರಾಗಿ, ಹುರುಳಿ, ಜೋಳ ಎಂದು ತಿಳಿಸಿದ್ದಾರೆ ಆದರೆ ಇಲ್ಲಿಯ ಮೂಲಬೆಳೆ ತೆಂಗು ಆಗಿರುವುದರಿಂದ ಅದರ ಮೇಲೆ ಪರಿಣಾಮಬೀರುವುದು, ಕಲ್ಲು ಗಣಿಗಾರಿಕೆಯಿಂದ ಶಿಕ್ಷಣ ಮತ್ತು ಮೂಲ ಸೌಕರ್ಯವನ್ನು ಯಾವ ರೀತಿ ಒದಗಿಸುತ್ತೀರಿ ಎಂದು ಕೇಳಿದರು, ವಾಯುಮಾಲಿನ್ಯದ ಪರಿಣಾಮ ಈಗಾಗಲೇ ತೆಂಗು ಕಳೆದುಕೊಂಡಿರುವುದಾಗಿ ತಿಳಿಸಿದರು, ಡೈನೊಮೆಂಟ್ ಸ್ಫೋಟದಿಂದ ಉಂಟಾಗುವ ಶಬ್ದ ಮಾಲಿನ್ಯದಿಂದ ಮನೆಗಳು ಬಿರುಕು ಬಿಟ್ಟಿವೆ, ಟಿಪ್ಪರ್ ಲಾರಿ ಓಡಾಡುವುದರಿಂದ ರಸ್ತೆ ಹಾಳಾಗುತ್ತದೆ ಎಂದು ತಿಳಿಸಿ ಸದರಿ ಯೋಜನೆಗೆ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು.

16. ಅಧ್ಯಕ್ಷರು, ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು.
ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಯಾವುದೇ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಲಿಖಿತವಾಗಿ ನೀಡುವುದಾದರೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ನೀಡಬೇಕೆಂದು ತಿಳಿಸಿದರು.

ಈ ಸಭೆಯಲ್ಲಿ ನೆರೆದಿದ್ದ ಬೀರನಹಳ್ಳಿ ಗ್ರಾಮಸ್ಥರು, ಸಾದರಹಳ್ಳಿ ಗ್ರಾಮಸ್ಥರು, ಕಾರ್ಯದರ್ಶಿ, ಶ್ರೀ ವೀರಾಂಜನೇಯ ಯುವಕ ಸಂಘ(ರಿ), ಅಧ್ಯಕ್ಷರು, ಶ್ರೀರಾಮ ಸೇನೆ, ಗ್ರಾಮಸ್ಥರು ಹಾಗೂ ರೈತಾಪಿಗಳು, ಬೀರನಹಳ್ಳಿ ಮತ್ತು ಸಾದರಹಳ್ಳಿ ಗ್ರಾಮ ಇವರು ಲಿಖಿತ ಮನವಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದರು. ಲಿಖಿತವಾಗಿ ಸಲ್ಲಿಸಿದವರ ಮನವಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಆ ನಂತರ ಸಭೆಯ ಅಧ್ಯಕ್ಷರು, ಸಾರ್ವಜನಿಕರು ಮೌಖಿಕವಾಗಿ ತಿಳಿಸಿದ ಹಾಗೂ ಲಿಖಿತವಾಗಿ ಸಲ್ಲಿಸಿದ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ನಡವಳಿಯಲ್ಲಿ ದಾಖಲಿಸಿ ಛಾಯಾಚಿತ್ರ ಹಾಗು ವಿಡಿಯೋ ದಾಖಲಾತಿಗಳೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದ ಅಡಿಯಲ್ಲಿ ಬರುವ ರಾಜ್ಯ ಪರಿಸರ ಮೌಲ್ಯ ನಿರ್ಣಯ ಸಮಿತಿ (State Level Expert Appraisal Committee) ಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಸದಸ್ಯರಾದ ಶ್ರೀ.ಕುಮಾರ್, ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿದ ನಂತರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ. ಬಗಾದಿ ಗೌತಮ್)
ಜಿಲ್ಲಾಧಿಕಾರಿಗಳು,
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

# ಅನುಬಂಧ

## (ದ್ವಿಪ್ರತಿಗಳು)

1. ಸಾರ್ವಜನಿಕರ ಒಂದು ಲಿಖಿತ ಹೇಳಿಕೆ/ ಆಕ್ಷೇಪಣೆಯನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ–2** ರಲ್ಲಿ ಲಗತ್ತಿಸಲಾಗಿದೆ.
3. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ–3** ರಲ್ಲಿ ಲಗತ್ತಿಸಲಾಗಿದೆ.
4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರವಿರುವ ಡಾಕ್ಯುಮೆಂಟ್ ಪ್ರತಿಯನ್ನು **ಅನುಬಂಧ–4** ರಲ್ಲಿ ಲಗತ್ತಿಸಲಾಗಿದೆ.
5. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿ:13.09.2020 ರಂದು ಕರಪತ್ರಗಳನ್ನು ವಿತರಿಸಲಾದ ಪ್ರತಿಗಳನ್ನು **ಅನುಬಂಧ–5** ರಲ್ಲಿ ಲಗತ್ತಿಸಲಾಗಿದೆ.
6. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಡಿ.ವಿ.ಡಿ ಗಳ ಪ್ರತಿಯನ್ನು **ಅನುಬಂಧ–6** ರಲ್ಲಿ ಲಗತ್ತಿಸಲಾಗಿದೆ.

(ಡಾ. ಬಗಾದಿ ಗೌತಮ್)
**ಜಿಲ್ಲಾಧಿಕಾರಿಗಳು,**
**ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು**